**<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.</u>**

**<u>ಎಸ್.ಸಿ ಸಂಖ್ಯೆ:- 265/2023</u>**

| | | |
|---|---|---|
| **ಸಾಕ್ಷಿದಾರನ ಹೆಸರು** | : ಎನ್ . ವಿಶ್ವನಾಥ್ | **ಪಿ.ಡಬ್ಲ್ಯೂ:- 12** |
| **ತಂದೆಯ ಹೆಸರು** | : ನಾಗೇಶ್ ನಾಯಕ್ | **ಸಿ.ಡಬ್ಲ್ಯೂ:- 34** |
| **ವಯಸ್ಸು** | : 54 ವರ್ಷ | |
| **ಉದ್ಯೋಗ** | : ಸಹಾಯಕ ತಹಸೀಲ್ದಾರ್, ಮೈಸೂರು ತಾ. | |
| **ವಾಸಸ್ಥಳ** | : ಮೈಸೂರು. | |

**<u>ಸಾಕ್ಷಿಯನ್ನು ಈ ದಿನ ದಿ:05.03.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದ:-</u>**

**1.** ನಾನು ದಿ:- 08.03.2021 ರಿಂದ ಇಲ್ಲಿಯವರೆಗೆ ಹೆಚ್ಚುವರಿ ತಹಸೀಲ್ದಾರ್-ನಾಗಿ ಮೈಸೂರು ತಾಲ್ಲೂಕುನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

**2.** ದಿ:-12.07.2023 ರ ಪತ್ರದ ಮುಖಾಂತರ ಪೊಲೀಸ್ ನಿರೀಕ್ಷಕರು, ವಿದ್ಯಾರಣ್ಯಂಪುರಂ ಪೊಲೀಸ್ ಠಾಣೆರವರು ನ್ಯಾಯಾಂಗ ಬಂದನದಲ್ಲಿರುವ ಆರೋಪಿ ಶಿವರಾಜು ಎನ್ನುವವನನ್ನು ಗುರುತು ಹಚ್ಚುವ ಕವಾಯತ್ತನ್ನು ಮೈಸೂರು ಜಿಲ್ಲಾ ಕಾರಾಗೃಹದಲ್ಲಿ ನಡೆಸಿಕೊಡುವಂತೆ ಕೇಳಿಕೊಂಡಿರುತ್ತಾರೆ. ಸಾಕ್ಷಿಯು ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-41 ಎಂದು ಗುರುತಿಸಲಾಯಿತು.

**3.** ದಿ:- 18.07.2023 ರಂದು ಕೇಂದ್ರ ಕಾರಾಗೃಹದ ಮುಖ್ಯಸ್ಥರಿಗೆ ಮೈಸೂರು ಕಾರಾಗೃಹದಲ್ಲಿ ಆರೋಪಿ ಶಿವರಾಜುನನ್ನು ಗುರುತು ಹಚ್ಚುವ ಕವಾಯತ್ತನ್ನು ಜರುಗಿಸುವ

ಉದ್ದೇಶ ಇರುವುದರಿಂದ ಬೇಕಾದ ತಯಾರಿಯನ್ನು ಮಾಡಿಕೊಳ್ಳುವಂತೆ ಕೋರಿಕೊಂಡಿರುತ್ತೇನೆ. ದಿಃ– 18.07.2023 ರಂದು ಚೇತನ್ ಬಿನ್ ವೀರಭದ್ರಪ್ಪ ಮತ್ತು ಶ್ಯಾಮ್ ಲಾಲ್ ಬಿನ್ ಉಕ್ಕರಾಮ್ ರವರಿಗೆ ತಿಳುವಳಿಕೆ ಪತ್ರ ನೀಡಿ ಗುರುತು ಹಚ್ಚುವ ಕವಾಯತ್ತಿನಲ್ಲಿ ಹಾಜರಾಗುವಂತೆ ತಿಳಿಸಿರುತ್ತೇನೆ.

4. ದಿಃ– 21.07.2023 ರಂದು ಮದ್ಯಾಹ್ನ 12.15 ಕ್ಕೆ ಕೇಂದ್ರ ಕಾರಾಗೃಹದ ಮುಂಭಾಗದಲ್ಲಿ ಹೋದಾಗ ಅಲ್ಲಿ ಪೊಲೀಸ್ ಸಿಬ್ಬಂದಿಯವರು ಸಾಕ್ಷಿಗಳಾದ ಚೇತನ್ ಮತ್ತು ಶ್ಯಾಮ್ ಲಾಲ್ ರವರ ಪರಿಚಯವನ್ನು ಮಾಡಿರುತ್ತಾರೆ. ನಂತರ ಮದ್ಯಾಹ್ನ 12.26 ಗಂಟೆಗೆ ನಾನು ಕಾರಾಗೃಹ ಜೈಲರ್ ರವರನ್ನು ಬೇಟಿಯಾಗಿದ್ದು, ಅವರು ಗುರುತು ಹಚ್ಚುವ ಕವಾಯತ್ತಿನ ತಯಾರಿ ಬಗ್ಗೆ ತಿಳಿಸಿರುತ್ತಾರೆ. ನಂತರ ಆರೋಪಿ ಶಿವರಾಜುನನ್ನು ಕರೆಯಿಸಿರುತ್ತೇನೆ. ನಂತರ 20 ವಿಚಾರಣಾಧೀನ ಕೈದಿಗಳನ್ನು ಕರೆಸಿರುತ್ತೇನೆ. ಅದರಲ್ಲಿ ಆರೋಪಿಯ ಚಹರೆಗೆ ಹೋಲುವ 9 ಜನರನ್ನು ಆಯ್ಕೆ ಮಾಡಿ ನಿಲ್ಲಿಸಿರುತ್ತೇನೆ. ಈ ಮದ್ಯೆದಲ್ಲಿ ಇಬ್ಬರು ಸಾಕ್ಷಿದಾರರನ್ನು ಒಳಗೆ ಕರೆಯಿಸಿ, ಟೈಲರಿಂಗ್ ಸೆಂಟರಿನ ಕೋಣೆಯಲ್ಲಿ ಯಾರಿಗೂ ಕಾಣದಂತೆ ಕೂರಿಸಿರುತ್ತೇನೆ. ಮೊದಲನೇ ಸರದಿಯಲ್ಲಿ 10 ಜನರನ್ನು ನಿಲ್ಲಿಸಿದ್ದು, ಅದರಲ್ಲಿ ಆರೋಪಿಯನ್ನು 7 ನೇ ಸ್ಥಾನದಲ್ಲಿ ನಿಲ್ಲಿಸಿರುತ್ತೇನೆ. ನಂತರ ಸಾಕ್ಷಿ ಚೇತನ್ ರವರನ್ನು ಕರೆಯಿಸಿ ತಾನು ಆರೋಪಿಯನ್ನು ಗುರುತಿಸುವ ಬಗ್ಗೆ ಕೇಳಿದಾಗ ಚೇತನ್ ಆರೋಪಿಯನ್ನು ಗುರುತಿಸಿರುತ್ತಾರೆ. ನಂತರ ಚೇತನ್ ನನ್ನು ವಾಪಸ್ಸು ಕೊಠಡಿಗೆ ಕಳುಹಿಸಿರುತ್ತೇನೆ. ನಂತರ ಆ ಸರದಿಯಲ್ಲಿ ನಿಲ್ಲಿಸಿದ 10 ಜನರನ್ನು ಅದಲು–ಬದಲು ಮಾಡಿ ನಿಲ್ಲಿಸಿರುತ್ತೇನೆ. ಆಗ ಆರೋಪಿ 2 ನೇ ಸ್ಥಾನದಲ್ಲಿ ನಿಂತಿರುತ್ತಾನೆ. ಮತ್ತೆ ಚೇತನನ್ನು

ಕೋಣೆಯಿಂದ ಕರೆಸಿ ಆರೋಪಿಯನ್ನು ಗುರುತಿಸಲು ಕೇಳಿದಾಗ ಆತ ಆರೋಪಿಯನ್ನು ಸದರಿ ಸಾಲಿನಲ್ಲಿ ಗುರುತಿಸಿರುತ್ತಾನೆ. ಮತ್ತೆ ಚೇತನ್ ನನ್ನು ವಾಪಸ್ಸು ಕೋಣೆಗೆ ಕಳುಹಿಸಿರುತ್ತೇನೆ. ನಂತರ 3 ನೇ ಸುತ್ತಿಗೆ ತಯಾರಿ ಮಾಡಿ ಸದರಿ ಸಾಲಿನಲ್ಲಿ ನಿಂತ ಅಸಾಮಿಗಳನ್ನು ಅದಲು-ಬದಲು ಮಾಡಿ ನಿಲ್ಲಿಸಿರುತ್ತೇನೆ. ಆರೋಪಿಯನ್ನು 6 ನೇ ಸ್ಥಾನದಲ್ಲಿ ನಿಲ್ಲಿಸಿರುತ್ತೇನೆ. ಮತ್ತೆ ಚೇತನ್ ರವರನ್ನು ಕರೆಯಿಸಿ ಗುರುತಿಸಲು ಕೇಳಿದಾಗ ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುತ್ತಾನೆ. ಸದರಿ ಆರೋಪಿಯನ್ನು ಯಾವ ಕಾರಾಣಕ್ಕೆ ಗುರುತಿಸಿರುತ್ತೀರಿ? ಎಂದು ಕೇಳಿದಾಗ, ದಿಃ- 21.06.2023 ರಂದು ರಾತ್ರಿ 7.50 ಗಂಟೆಗೆ ಬಂಡಿ ಪಾಳ್ಯದಲ್ಲಿ ಒಬ್ಬ ತಾತನಿಗೆ ಕಲ್ಲಿನಿಂದ ಹೊಡೆಯುತ್ತಿದ್ದ, ಆತನನ್ನು ನೋಡಿ ಓಡಿ ಹೋಗಿದ್ದು, ಆತನನ್ನು ಗುರುತಿಸಿರುತ್ತೇನೆ ಎಂದು ತಿಳಿಸಿರುತ್ತಾರೆ.

**5.** ನಂತರ ಆ ಸಮಯದಲ್ಲಿ ಸದರಿ ಪ್ರಕ್ರಿಯೆಯನ್ನು ಬರೆದು ಮಹಜರನ್ನು ಜರುಗಿಸಿ ಸಾಕ್ಷಿ ಚೇತನ್ ರವರ ಸಹಿಯನ್ನು ಪಡೆದುಕೊಂಡಿರುತ್ತೇನೆ. ನಂತರ ಸದರಿ ದಾಖಲೆಗೆ ನಾನು ಕೂಡ ಸಹಿ ಮಾಡಿರುತ್ತೇನೆ. ಸಾಕ್ಷಿಯನ್ನು ಸದರಿ ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ-23 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ-23(ಸಿ) ಎಂದು ಗುರುತಿಸಲಾಯಿತು.

**6.** ನಂತರ ಶ್ಯಾಮ್ ಲಾಲ್ ಆರೋಪಿಯನ್ನು ಗುರುತು ಹಚ್ಚುವ ಬಗ್ಗೆ ಕವಾಯತ್ತನ್ನು ಮಾಡಿದ್ದು, ಈ ಬಾರಿ ಮೊದಲನೇ ಸರದಿಯಲ್ಲಿ 10 ಜನರನ್ನು ನಿಲ್ಲಿಸಿದ್ದು, ಅದರಲ್ಲಿ ಆರೋಪಿಯನ್ನು 2 ನೇ ಸ್ಥಾನದಲ್ಲಿ ನಿಲ್ಲಿಸಿರುತ್ತೇನೆ. ನಂತರ ಸಾಕ್ಷಿ ಶ್ಯಾಮ್ ಲಾಲ್ ರವರನ್ನು ಕರೆಯಿಸಿ ತಾನು ಆರೋಪಿಯನ್ನು ಗುರುತಿಸುವ ಬಗ್ಗೆ ಕೇಳಿದಾಗ ಶ್ಯಾಮ್

ಲಾಲ್ ಆರೋಪಿಯನ್ನು ಗುರುತಿಸಿರುತ್ತಾರೆ. ನಂತರ ಶ್ಯಾಮ್ ಲಾಲ್ ನನ್ನು ವಾಪಸ್ಸು ಕೊಠಡಿಗೆ ಕಳುಹಿಸಿರುತ್ತೇನೆ. ನಂತರ ಆ ಸರದಿಯಲ್ಲಿ 2 ನೇ ಸುತ್ತಿನಲ್ಲಿ 10 ಜನರನ್ನು ಅದಲು–ಬದಲು ಮಾಡಿ ನಿಲ್ಲಿಸಿರುತ್ತೇನೆ. ಆಗ ಆರೋಪಿ 10 ನೇ ಸ್ಥಾನದಲ್ಲಿ ನಿಂತಿರುತ್ತಾನೆ. ಮತ್ತೆ ಶ್ಯಾಮ್ ಲಾಲ್ ನನ್ನು ಕೋಣೆಯಿಂದ ಕರೆಸಿ ಆರೋಪಿಯನ್ನು ಗುರುತಿಸಲು ಕೇಳಿದಾಗ ಆತ ಆರೋಪಿಯನ್ನು ಸದರಿ ಸಾಲಿನಲ್ಲಿ ಗುರುತಿಸಿರುತ್ತಾನೆ. ಮತ್ತೆ ಶ್ಯಾಮ್ ಲಾಲ್ ನನ್ನು ವಾಪಸ್ಸು ಕೋಣೆಗೆ ಕಳುಹಿಸಿರುತ್ತೇನೆ. ನಂತರ 3 ನೇ ಸುತ್ತಿಗೆ ತಯಾರಿ ಮಾಡಿ ಸದರಿ ಸಾಲಿನಲ್ಲಿ ನಿಂತ ಅಸಾಮಿಗಳನ್ನು ಅದಲು–ಬದಲು ಮಾಡಿ ನಿಲ್ಲಿಸಿರುತ್ತೇನೆ. ಆರೋಪಿಯನ್ನು 6 ನೇ ಸ್ಥಾನದಲ್ಲಿ ನಿಲ್ಲಿಸಿರುತ್ತೇನೆ. ಮತ್ತೆ ಶ್ಯಾಮ್ ಲಾಲ್ ರವರನ್ನು ಕರೆಯಿಸಿ ಗುರುತಿಸಲು ಕೇಳಿದಾಗ ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುತ್ತಾನೆ. ಸದರಿ ಆರೋಪಿಯನ್ನು ಯಾವ ಕಾರಣಕ್ಕೆ ಗುರುತಿಸಿರುತ್ತೀರಿ? ಎಂದು ಕೇಳಿದಾಗ, ದಿಃ– 21.06.2023 ರಂದು ರಾತ್ರಿ 7.50 ಗಂಟೆಯಲ್ಲಿ ಒಬ್ಬ ತಾತನಿಗೆ ಕಲ್ಲಿನಿಂದ ಹೊಡೆ ಓಡಿ ಹೋಗುತ್ತಿದ್ದು, ಆತನನ್ನು ಗುರುತಿಸಿರುತ್ತೇನೆ ಎಂದು ತಿಳಿಸಿರುತ್ತಾರೆ.

**7.** ನಂತರ ಆ ಸಮಯದಲ್ಲಿ ಸದರಿ ಪ್ರಕ್ರಿಯೆಯನ್ನು ಬರೆದು ಮಹಜರನ್ನು ಜರುಗಿಸಿ ಸಾಕ್ಷಿ ಶ್ಯಾಮ್ ಲಾಲ್ ರವರ ಸಹಿಯನ್ನು ಪಡೆದುಕೊಂಡಿರುತ್ತೇನೆ. ನಂತರ ಸದರಿ ದಾಖಲೆಗೆ ನಾನು ಕೂಡ ಸಹಿ ಮಾಡಿರುತ್ತೇನೆ. ಸಾಕ್ಷಿಯನ್ನು ಸದರಿ ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ–26 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–26(ಸಿ) ಎಂದು ಗುರುತಿಸಲಾಯಿತು.

**8.** ನಂತರ ಗುರುತು ಹಚ್ಚುವ ಕವಾಯತ್ತಿನ ಪ್ರಕ್ರಿಯೇ ಮಹಜರ್ ಗಳನ್ನು ನ್ಯಾಯಾಲಯಕ್ಕೆ ಪತ್ರದ ಮುಖಾಂತರ ಸಲ್ಲಿಸಿಕೊಂಡಿರುತ್ತೇನೆ.

**9.** ಸಾಕ್ಷಿಯು ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–**42** ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–**42**(ಎ) ಎಂದು ಗುರುತಿಸಲಾಯಿತು.

**10.** ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿದ್ದ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–**

**11.** ಚೇತನ್ ಮತ್ತು ಶ್ಯಾಮ್ ಲಾಲ್ ಗೆ ತಿಳುವಳಿಕೆ ಪತ್ರ ನೀಡಿರುತ್ತೇನೆ ಎಂದು ಹೇಳಿದ್ದು ಸದರಿ ತಿಳುವಳಿಕೆ ಪತ್ರ ಅವರಿಗೆ ತಲುಪಿದ ಬಗ್ಗೆ ಹಿಂಬಹರ ಇರುತ್ತದೆಯೇ? ಎಂದರೆ ಸಾಕ್ಷಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಕೇಂದ್ರ ಕಾರಾಗೃಹದ ಅಧಿಕಾರಿಯವರಿಗೆ ಗುರುತು ಹಚ್ಚುವ ಕವಾಯತ್ತಿಗೆ ತಯಾರಿ ಮಡಿಕೊಳ್ಳುವಂತೆ ತಿಳಿಸಿರುವ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

**12.** ಕೇಂದ್ರ ಕಾರಾಗೃಹಕ್ಕೆ ಬೇಟಿ ನೀಡಿದಾಗ, ಯಾವ ಸಿಬ್ಬಂದಿಯವರು ಸಾಕ್ಷಿದಾರರಾದ ಚೇತನ್ ಮತ್ತು ಶ್ಯಾಮ್ ಲಾಲ್ ನನ್ನು ನಿಮಗೆ ಬೇಟಿ ಮಾಡಿಸಿರುತ್ತಾರೆ? ಎಂದರೆ ಸಾಕ್ಷಿಯ ಅವರು ಪೊಲೀಸ್ ಸಿಬ್ಬಂದಿ ಆಗಿದ್ದು, ಅವರ ಹೆಸರು ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ಶ್ಯಾಮ್ ಲಾಲ್ ಮತ್ತು ಚೇತನ್ ರವರನ್ನು ನಿಮ್ಮ ಜೊತೆ ಕಾರಾಗೃಹದ ಒಳಗಡೆ ಕರೆದುಕೊಂಡು ಹೋಗಿರುತ್ತೀರಿಯೇ? ಎಂದರೆ ಸಾಕ್ಷಿಯು ನಾನು

ಮೊದಲು ಒಳಗಡೆ ಹೋಗಿ ನಂತರ ಅವರನ್ನು ಕರೆಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಜೈಲು ಅಧಿಕಾರಿಯನ್ನು ಬೇಟಿಯಾದ 12.26 ಗಂಟೆ ಆಗಿತ್ತು.

**13.** ಗುರುತು ಹಚ್ಚುವ ಕವಾಯತ್ತನ್ನು ಎಷ್ಟು ಗಂಟೆಗೆ ಪ್ರಾರಂಭಿಸಿರುತ್ತೀರಿ? ಎಂದರೆ ಸಾಕ್ಷಿ ಜೈಲು ಅಧಿಕಾರಿಯನ್ನು ಬೇಟಿಯಾದ 10 ನಿಮಿಷಕ್ಕೆ ಪ್ರಾರಂಭಿಸಿರುತ್ತೇನೆ ನಿಖರವಾದ ಸಮಯ ಬರೆದುಕೊಂಡಿರುವುದಿಲ್ಲ. ವರದಿಯಲ್ಲಿಯೂ ಸಹ ಸಮಯವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ.

**14.** ಜೈಲಿನ ರಿಜಿಸ್ಟರ್ ನಲ್ಲಿ ನಮೂದು ಮಾಡಿರುವ ಸಮಯ 12.26 ಗಂಟೆ ಆಗಿರುತ್ತದೆ ಎಂದರೆ ಸರಿ. 20 ಜನ ವಿಚಾರಾಣಧೀನ ಕೈದಿಗಳನ್ನು ನೀವೇ ಕರೆಸಿರುತ್ತೀರಿಯೇ? ಎಂದರೆ ಸಾಕ್ಷಿಯು ಜೈಲು ಅಧಿಕಾರಿಯವರು 20 ಜನರನ್ನು ಕರೆಸಿದ್ದು, ಅದರಲ್ಲಿ ನಾನು ಆರೋಪಿಯ ಚಹರೆಗೆ ಹೋಲುವ 9 ಜನರನ್ನು ಆಯ್ಕೆ ಮಾಡಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಪ್ರಕ್ರಿಯೇ ಮುಗಿಯುವ ಕಾಲಕ್ಕೆ 1.05 ಗಂಟೆ ಆಗಿತ್ತು. 1.05 ಗಂಟೆಗೆ ಪ್ರಕ್ರಿಯೆ ಮುಗಿದ ಬಗ್ಗೆ ವರದಿಯಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. 1.05 ಗಂಟೆ ಜೈಲಿನಿಂದ ಹೊರಗಡೆ ಬರುವಾಗ ರಿಜಿಸ್ಟರ್ ನಲ್ಲಿ ನಮೂದು ಮಾಡಿದ ಸಮಯವಾಗಿರುತ್ತದೆ ಎಂದರೆ ಸರಿ.

**15.** ಸದರಿ 20 ಜನ ವಿಚಾರಣಾಧೀನ ಕೈದಿಗಳನ್ನು ಕರೆಸಿದ್ದರು ಎಂದು ಹೇಳಿದ್ದು, ಅವರ ಯುಟಿಪಿ ನಂಬರ್ ಮತ್ತು ವಯಸ್ಸನ್ನು ವರದಿಯಲ್ಲಿ ನಮೂದಿಸಿರುತ್ತೀರಿಯೇ? ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. 9 ಜನರನ್ನು ಆಯ್ಕೆ ಮಾಡಿದ್ದೆ ಎಂದು ಹೇಳಿದ್ದು, ಅವರ ಯುಟಿಪಿ ನಂಬರ್ ಗಳನ್ನು ಪಡೆದುಕೊಂಡಿರುತ್ತೀರಿಯೇ? ಎಂದರೆ

ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ 9 ಜನರ ಯುಟಿಪಿ ನಂಬರ್, ವಯಸ್ಸು ಮತ್ತು ಚಹರೆ ವರದಿಯಲ್ಲಿ ಬರೆದಿರುವುದಿಲ್ಲ ಎಂದರೆ ಸರಿ.

**16.** ಗುರುತು ಹಚ್ಚುವ ಕವಾಯತ್ತಿಗೆ ಬೇರೆ ಯಾವುದೇ ಪಂಚರನ್ನು ಕರೆದುಕೊಂಡು ಹೋಗಿರುವುದಿಲ್ಲ. ಕರೆದುಕೊಂಡು ಹೋಗಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಅದಕ್ಕೆ ಅವಕಾಶ ಇರಲಿಲ್ಲ ಎಂದು ನುಡಿಯುತ್ತಾರೆ. ಮೊದಲಿಗೆ 20 ಜನರನ್ನು ಕರೆಸಿ ನಿಲ್ಲಿಸಿ ನಂತರ ಆರೋಪಿಯನ್ನು ಕರೆಸಿರುತ್ತಿರಿಯೋ? ಅಥವಾ ಆರೋಪಿಯನ್ನು ಕರೆಸಿ ನಂತರ 20 ಜನರನ್ನು ಕರೆಸಿರುತ್ತೀರಿಯೇ? ಎಂದರೆ ಸಾಕ್ಷಿಯು ಮೊದಲಿಗೆ ಆರೋಪಿಯನ್ನು ಕರೆಸಿ ಆತನನ್ನು ನೋಡಿ ನಂತರ ಯುಟಿಪಿ ಕೈದಿಗಳನ್ನು ಕರೆಸಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಮೊದಲಿಗೆ ಆರೋಪಿಯನ್ನು ಕರೆಸಿ ನಂತರ 20 ಜನರನ್ನು ಕರೆಸಿ ಅದರಲ್ಲಿ 9 ಜನರನ್ನು ಆಯ್ಕೆ ಮಾಡಲು ಎಷ್ಟು ಕಾಲ ಬೇಕಾಯಿತು ಎಂದರೆ ಸಾಕ್ಷಿಯು 5 ರಿಂದ 10 ನಿಮಿಷ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಜೈಲು ಸಿಬ್ಬಂದಿಯ ಮುಖಾಂತರ ಇಬ್ಬರು ಸಾಕ್ಷಿದಾರರನ್ನು ಜೈಲಿನ ಒಳಗಡೆ ಕರೆಸಿರುತ್ತೇನೆ. 9 ಜನರನ್ನು ಆಯ್ಕೆ ಮಾಡಿದ ನಂತರ ಸಾಕ್ಷಿದಾರರನ್ನು ಕರೆಸಿರುತ್ತೇನೆ. ಅವರ ಜೊತೆ ಯಾವುದೇ ಪೊಲೀಸ್ ಸಿಬ್ಬಂದಿ ಬಂದಿರುವುದಿಲ್ಲ.

**17.** ಗುರುತು ಹಚ್ಚುವ ಕವಾಯತ್ತನ್ನು ಮಾಡುತ್ತಿದ್ದ ಧ್ಯಾನಮಂದಿರದ ಸ್ಥಳಕ್ಕೂ ಮತ್ತು ಇಬ್ಬರು ಸಾಕ್ಷಿದಾರರನು ಕೂರಿಸಿದ ಟೈಲರಿಂಗ್ ಕೋಣೆಗೂ ಎಷ್ಟು ಅಂತರದಲ್ಲಿರುತ್ತದೆ ಎಂದರೆ ಸಾಕ್ಷಿಯು 10 ಮೀಟರ್ ಅಂತರದಲ್ಲಿದ್ದು, ಆದರೆ ನಡುವೆ ಗೋಡೆ ಇದ್ದು ಎರಡು

ಸ್ಥಳದ ನಡುವೆ ಕಾಣುವುದಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕ್ರಿಯೆಯನ್ನು ಸಹಾಯಕ್ಕಾಗಿ ಇಬ್ಬರು ಜೈಲು ಸಿಬ್ಬಂದಿಗಳಿದ್ದರು. ಅವರ ಜೊತೆಗೆ ಜೈಲರ್ ಕೂಡ ಇದ್ದರು.

**18.** 9 ಜನ ಯುಟಿಪಿ ಕೈದಿಗಳು ಬೇರೆ–ಬೇರೆ ಬಟ್ಟೆಗಳನ್ನು ಹಾಕಿಕೊಂಡಿದ್ದರು. ನಾನು ಇಲ್ಲಿಯವರೆಗೆ ಸುಮಾರು 150 ಗುರುತು ಹಚ್ಚುವ ಕವಾಯತ್ತನ್ನು ಜರುಗಿಸಿರುತ್ತೇನೆ. ಗುರುತು ಹಚ್ಚುವ ಕವಾಯತ್ತು ನಮೂನೆ ಇರುತ್ತದೆ ಎಂದರೆ ಸರಿ. ಸದರಿ ನಮೂನೆಯಲ್ಲಿ ನಾನು ಪ್ರಕ್ರಿಯೆ ಕಾಲದಲ್ಲಿ ಬರೆಯುತ್ತಾ ಹೋಗುತ್ತೇನೆ ಎಂದರೆ ಸರಿ. ಸಾಕ್ಷಿದಾರರನ್ನು ಪರಿಚಯಿಸಿದಾಗ ಅವರ ಜೊತೆ ಬೇರೆ ಯಾವುದೇ ವಿಚಾರ ಮಾತನಾಡಿರುವುದಿಲ್ಲ. ಪ್ರಕ್ರಿಯೇ ಕಾಲದಲ್ಲಿ ನಮೂನೆಯಲ್ಲಿ ಪುಟಸಂಖ್ಯೆ–2 ರಲ್ಲಿ ನಮೂದಿಸಿರುವ 5 ಪ್ರಶ್ನೆಗಳನ್ನು ಸಾಕ್ಷಿದಾರರಿಗೆ ಕೇಳಿರುತ್ತೇನೆ ಎಂದರೆ ಸರಿ.

**19.** ಚೇತನ್ ಒಂದು ಸುತ್ತಿನಲ್ಲಿ ಆರೋಪಿಯನ್ನು ಗುರುತಿಸುವ ಪ್ರಕ್ರಿಯೇ ಸುಮಾರು 2 ರಿಂದ 3 ನಿಮಿಷ ಆಗಿರುತ್ತದೆ. ಪ್ರತಿ ಸುತ್ತಿನಲ್ಲೂ 2 ರಿಂದ 3 ನಿಮಿಷ ಆಗಿರುತ್ತದೆ. ಚೇತನ್ ನಿಗೆ ಸಂಬಂಧಿಸಿದ ಪ್ರಕ್ರಿಯೆ ಮುಗಿಸಲು 9 ರಿಂದ 10 ನಿಮಿಷ ಆಗಿರುತ್ತದೆ. ಪ್ರತಿ ಸುತ್ತಿನಲ್ಲಿ ಗುರುತಿಸಿದ ನಂತರ ಆತ ವಾಪಸ್ಸು ಇಬ್ಬರು ಸಾಕ್ಷಿದಾರರನ್ನು ಇರಿಸಿದ ಕೋಣೆಗೆ ಹೋಗಿರುತ್ತಾರೆ ಎಂದರೆ ಸರಿ. ನಂತರ ಜೈಲು ಸಿಬ್ಬಂದಿ ಮುಖಾಂತರ ಮತ್ತೆ ಕರೆಸಲಾಗುತ್ತಿತ್ತು ಎಂದರೆ ಸರಿ. ಚೇತನ್ ರವರ ಆದಾರ್ ಕಾರ್ಡ್ ಅಥವಾ ಗುರುತಿನ ಚೀಟಿಯನ್ನು ಗುರುತಿಸಿರುತ್ತೀರಿಯೇ ಎಂದರೆ ಸಾಕ್ಷಿಯು ಪೊಲೀಸರು ಕಾರಾಗೃಹದ ಹೊರಗಡೆ ಪರಿಶೀಲನೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ .

**20.** ಚೇತನ್ ಗೆ ನೋಟೀಸ್ ನೀಡಿದ್ದು, ಆತ ಸಹಿ ಮಹದೇವ ಎಂದು ಮಾಡಿದ್ದು, ಅದರ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ. ಚೇತನ್ ನ ಗುರುತು ಹಚ್ಚುವ ಕವಾಯತ್ತಿನ ದಾಖಲೆಯಲ್ಲಿ ದಿನಾಂಕ ತಿದ್ದಲಾಗಿರುತ್ತದೆ ಎಂದರೆ ಸಾಕ್ಷಿಯು ಕೈ ತಪ್ಪಿನಿಂದ 23 ಕ್ಕೆ 21 ಎಂದು ಆಗಿದ್ದು ಅದನ್ನು ಸರಿಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಎಲ್ಲಾ ಪ್ರಕ್ರಿಯೆ ಮುಗಿದನಂತರ ಚೇತನ್ ರವರನ್ನು ಇನ್ನೊಬ್ಬ ಸಾಕ್ಷಿದಾರರಿದ್ದ ಕೋಣೆಗೆ ಕಳುಹಿಸಿರುತ್ತೀರಿಯೇ? ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

**21.** ಸದರಿ 9 ಜನರನ್ನು ಮತ್ತೆ ಅದಲು–ಬದಲು ನಿಲ್ಲಿಸಿರುತ್ತೇವೆ. ಅದಕ್ಕೆ 1 ರಿಂದ 2 ನಿಮಿಷ ಆಗಿರುತ್ತದೆ. ನಂತರ ಇನ್ನೊಬ್ಬ ಸಾಕ್ಷಿದಾರ ಶ್ಯಾಮ್ ಲಾಲ್ ರವರನ್ನು ಕೋಣೆಯಿಂದ ಕರೆಸಿರುತ್ತೇನೆ. ಶ್ಯಾಮ್ ಲಾಲ್ ಗುರುತು ಹಚ್ಚುವಾಗ ಆರೋಪಿ ಮತ್ತು ಸದರಿ 9 ಜನರು ಚೇತನ್ ಗುರುತು ಹಚ್ಚುವ ಕಾಲದಲ್ಲಿ ಧರಿಸಿದ್ದ ಬಟ್ಟೆಗಳನ್ನು ಧರಿಸಿರುತ್ತಾರೆಯೇ? ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

**22.** ಶ್ಯಾಮ್ ಲಾಲ್ ಗುರುತು ಹಚ್ಚಲು 2 ರಿಂದ 3 ನಿಮಿಷ ತೆಗೆದುಕೊಂಡಿರುತ್ತಾರೆ. ಅದೇ ರೀತಿ 3 ಸುತ್ತಿನಲ್ಲಿ ಗುರುತು ಹಚ್ಚಲು ಸುಮಾರು 9 ನಿಮಿಷ ತೆಗೆದುಕೊಂಡಿರುತ್ತಾನೆ.

**23.** ಘಟನೆ ನಡೆದ ಸಮಯದಿಂದ ಗುರುತು ಹಚ್ಚುವ ಮಧ್ಯದಲ್ಲಿ ಸಾಕ್ಷಿದಾರರಿಗೆ ಫೋಟೋ ಮತ್ತು ವಿಡಿಯೋಗಳನ್ನು ತೋರಿಸಿದ ಬಗ್ಗೆ ಮನವರಿಕೆ ಮಾಡಿಕೊಂಡಿರುತ್ತೀರಿಯೇ? ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ.

**24.** ನಾನು ಯಾವುದೇ ಗುರುತು ಹಚ್ಚುವ ಕವಾಯತ್ತನ್ನು ಜರುಗಿಸಿರುವುದಿಲ್ಲ, ಪೊಲೀಸರ ಹೇಳಿಕೆ ಮೇರೆಗೆ ಗುರುತು ಹಚ್ಚುವ ಕವಾಯತ್ತಿನ ದಾಖಲೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಮೂನೆಯನ್ನು ತುಂಬಿ ನಾನು ಪೊಲೀಸರ ಕೋರಿಕೆ ಮೇರೆಗೆ ನೀಡಿರುತ್ತೇನೆ, ನಾನು ಯಾವುದೇ ಯುಟಿಪಿ ಕೈದಿಗಳನ್ನು ಕರೆಸಿ ಗುರುತು ಹಚ್ಚುವ ಕವಾಯತ್ತನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ಯುಟಿಪಿ ನಂಬರ್ ಗಳನ್ನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಗುರುತು ಹಚ್ಚುವ ಕವಾಯತ್ತಿಗೆ ಎಷ್ಟು ಸಮಯದಿಂದ ಎಷ್ಟು ಸಮಯ ಜರುಗಿಸಲಾಯಿತು ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನಮೂನೆಯಲ್ಲಿ ಅದು ಇರುವುದಿಲ್ಲ ಎಂದು ನುಡಿಯುತ್ತಾರೆ.

**25.** ಇಬ್ಬರು ಸಾಕ್ಷಿದಾರರು ಗುರುತು ಹಚ್ಚುವ ಕವಾಯತ್ತಿನಲ್ಲಿ ಬಾಗಿಯಾಗಿರುವುದಿಲ್ಲ, ನಾವು ಸೃಷ್ಟಿ ಮಾಡಿದ ದಾಖಲೆಗೆ ಅವರ ಸಹಿಯನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಮೈಸೂರು.**